ಮೇಟಿ ಕೊಟ್ರಪ್ಪ, ಬಸರಕೋಡು

ಯಕ್ಷ ಪ್ರಶ್ನೆಗೂ ಉತ್ತರಿಸುವ ನಿಮಗೆ ಯಾವ ಪ್ರಶಸ್ತಿ ಕೊಡಬೇಕು?



ಈ ಅಂಕಣದ ಪ್ರಶ್ನೆಗಳಿಗೆ ಉತ್ತರಿಸುವ ಅವಕಾಶಕ್ಕಿಂತ ದೊಡ್ಡ ಪ್ರಶಸ್ತಿ ಇಲ್ಲವೇ ಇಲ್ಲ.

ಆರ್. ಮಧುಸೂದನ್, ಹಾಸನ

ತಮ್ಮಂದಿರ ಜೊತೆ ಚರ್ಚಿಸದೆ ಎಲ್ಲವನ್ನೂ ಪಣಕ್ಕಿಟ್ಟ ಧರ್ಮರಾಯನದು ಅಧರ್ಮ ಅಲ್ಲವೆ?

ಅಂದಿಗೂ ಇಂದಿಗೂ ಹೈಕಮಾಂಡ್ ತೀರ್ಪು ಚರ್ಚಾತೀತ. ಧರ್ಮಜ ಪಾಂಡವರ ಹೈಕಮಾಂಡ್.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ದ್ರೌಪದಿಯ ಅಕ್ಷಯಾಂಬರದಂತಿರುವ ಸೀರಿಯಲ್‌ಗಳಿಗೂ ಕೃಷ್ಣನೇ ಕಾರಣವೇನು?

ಊಹೂಂ. ಕರ್ಣನಂತೆ ಕಣ್ಣುಕೀಳದೆ ನೋಡುವವರು, ದುಶ್ಯಾಸನನಂತೆ ಕಥೆ ಎಳೆಯುವವರು.

ವಿ. ಹಮೀದ್, ವಿಟ್ಲ

ಆಪತ್ಬಾಂಧವ ಇಂದು ಎಲ್ಲಿ ಕಾಣಸಿಗುತ್ತಾನೆ ಗುರೂ?



ಕಾಲ್ ಸೆಂಟರ್‌ನಲ್ಲಿ! ಮನೆ, ಸಾಲ, ವಸ್ತು, ವ್ಯಕ್ತಿ ಎಲ್ಲವೂ ಅಲ್ಲಿ ಲಭ್ಯ.

ಪಿ.ಜೆ. ರಾಘವೇಂದ್ರ, ಮೈಸೂರು

ಸರ್ಕಾರಿ ಕೆಲಸ ದೇವರ ಕೆಲಸ. ಖಾಸಗಿ ಕೆಲಸ?

ಮಂತ್ರವಾದಿಗಳದು ವಶೀಕರಣ, ಪೀಡನ, ಉಚ್ಚಾಟನ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ರಾಮ್‌ಗೂ, ಅಲಾರಾಮ್‌ಗೂ ವ್ಯತ್ಯಾಸವೇನು?

ತನು ಪುಟಿದೇಳಲು ಅಲಾರಾಮ್; ಮನ ಪುಟಿದೇಳಲು ರಾಮ್.

ಶಿವಮೊಗ್ಗ ನರಹರಿ, ಬೆಂಗಳೂರು

ಹೆತ್ತ ತಾಯಿ ಹೆಚ್ಚೋ, ಕೈಹಿಡಿದ ಹೆಂಡತಿ ಹೆಚ್ಚೋ?

ವಯಸ್ಸಿನಲ್ಲಿ ತಾಯಿ, ಸಂಖ್ಯೆಯಲ್ಲಿ ಶಕ್ತ್ಯಾನುಸಾರ ಹೆಂಡತಿ 2, 3, ಅಂತಃಪುರ.....

ರಮೇಶ್, ಹನುಮನಾಳು

ಪ್ರವಾಸಕ್ಕೆ ಹೋಗುವಾಗ ಇರುವ ಹುಮ್ಮಸ್ಸು ಬರುವಾಗ ಇರುವುದಿಲ್ಲ ಏಕೆ ರಾಮ್?

ಪರ್ಸು, ಪರ್ಪಸ್ಸು ಎರಡೂ ಖಾಲಿ ಆಗಿರುತ್ತದಲ್ಲ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಹಂದಿ ಹೊಲಸು ತಿಂದು ಪರಿಸರ ರಕ್ಷಿಸುತ್ತದೆ. ಮನುಷ್ಯ?

ಆ ಹಂದಿಯನ್ನೂ ತಿಂದು ಹೊಲಸು ರಕ್ಷಿಸುತ್ತಾನೆ.

ಡಾ. ವಿ. ಪುಗಳೇಂದಿ, ಬಳ್ಳಾರಿ

ಆಫೀಸ್ ಟೈಮಲ್ಲಿ ಮನೆಗೆಲಸ ಮಾಡುವವರಿಗೂ, ವರ್ಕ್ ಫ್ರಂ ಹೋಂ ಮಾಡುವವರಿಗೂ ವ್ಯತ್ಯಾಸ?

ಇವರು ಜಾಲಿ ಮಂದಿ, ಅವರು ಜಾಲಬಂಧಿ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ತೊಂದರೆ ಕೊಟ್ಟವರನ್ನು ಮರೆಯಬಾರದಂತೆ...?

ಮಾವನನ್ನು ಮರೆಯುವುದು ಸಾಧ್ಯವೂ ಇಲ್ಲ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಮನಸ್ಸು ಕಾಣದ ಸತ್ಯ ಯಾವುದು ಸಾರ್?

ನಿಜ ರೂಪ, ಗುಣ. ಪ್ರತಿ ವ್ಯಕ್ತಿಯೂ ಸ್ವಮನದಲ್ಲಿ ವಾಸ್ತವಕ್ಕಿಂತ ಸುಂದರ, ಒಳ್ಳೆಯವ.

ಮಹಾವೀರ ಕಾಸರ, ಶಿವಮೊಗ್ಗ

ಬೀದಿನಾಯಿಯನ್ನು ಕಂತ್ರಿನಾಯಿ ಎಂದು ಕರೆಯುವುದು ಸರಿಯೆ?

1ನೇ comeಗೆ ತಿರುಗಿ, 2ನೆಯದಕ್ಕೆ ಬಾಲವಾಡಿಸಿ, 3ನೆಯದಕ್ಕೆ ಸಮೀಪಿಸುವುದರಿಂದ come3ಯೇ!

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಸಂಸ್ಕೃತಿ ಸಂಸ್ಕೃತಕ್ಕೆ ಇರುವ ವ್ಯತ್ಯಾಸವೇನು?

ಸಂಸ್ಕೃತಿ ಆಚಾರಕ್ಕೆ ಮೆರಗು ನೀಡುತ್ತದೆ, ಸಂಸ್ಕೃತ ಉಚ್ಚಾರಕ್ಕೆ ಮೆರಗು ನೀಡುತ್ತದೆ.

## ಬಹುಮಾನಿತ ಪ್ರಶ್ನೆ

ಸಿ. ಆನಂದಪ್ಪ, ಬೆಂಗಳೂರು

ದನುವಿನ ಮಕ್ಕಳು ದಾನವರಾದರು. ಕದ್ರುವಿನ ಮಕ್ಕಳು ಸರ್ಪಗಳಾಗಲು ಉದ್ದೇಶವೇನು?

ಅಪ್ಪನ ಅರ್ಧ ಹೆಸರನ್ನು ಆಕಾರದಲ್ಲಿ ಹೋಲಲು; ಕಶ್ಯಪದಲ್ಲಿ ಕಶ ಎಂದರೆ ಚಾವಟಿ.

ರತ್ನ ಸತ್ಯೇಂದ್ರ, ಬೆಂಗಳೂರು

ಔದಾರ್ಯ, ಹೃದಯವೈಶಾಲ್ಯ, ಮಾನವೀಯತೆ ರಾಜಕಾರಣಿಗಳಿಗೆ ಯಾಕಿಲ್ಲ?

ಅವೆಲ್ಲ ಇರುವುದು ತಿಳಿದರೆ ಪಕ್ಷಗಳು ಟಿಕೆಟ್ ಕೊಡುವುದಿಲ್ಲವಂತೆ.

ಮನೋರಮಾ ಎಂ. ಪ್ರಭು, ಕಾಸರಕೋಡ

ಮನುಷ್ಯನ ಉನ್ನತಿ, ಅವನತಿಯನ್ನು ನಿರ್ಧರಿಸುವುದು ಯಾವುದು?

ಹಾರವೇ; ಕೊರಳಿಗೆ ಹಾರ ಬೀಳುತ್ತಿದ್ದರೆ ಉನ್ನತಿ; ಕೊರಳೇ ಹಾರವಾಗುವ ಸ್ಥಿತಿ ಬಂದರೆ ಅವನತಿ.

ಕಾವ್ಯಶ್ರೀ ಪತ್ರಿಮಠ, ಸುರಪುರ

ಅತಿ ಬುದ್ಧಿವಂತರ ಜಾಣತನ ಪ್ರದರ್ಶನವಾಗುವುದು ಯಾವಾಗ?



ಶತಮೂರ್ಖರೂ ಅವರ ಮುಂದೆ ಜಾಣರಾಗಿ ಕಂಡುಬಂದಾಗ.

ಎನ್. ವೈದೇಹಿ ಶೇಖರ್, ಮೈಸೂರು

ಹಿರೋಶಿಮಾ ನಾಗಸಾಕಿಗಳಂತೆಯೇ ಕೋವಿಡ್ 19 ಸಹ ಇತಿಹಾಸದ ಪುಟ ಸೇರಬಹುದಲ್ಲವೆ?

ಪುಟವಲ್ಲ, ಅಧ್ಯಾಯವನ್ನೇ ಸೇರುತ್ತದೆ. ಕೋವಿಡ್‌ಗೆ ಜನನಿರ್ಲಕ್ಷ್ಯವೇ ಪೌಷ್ಟಿಕ ಆಹಾರ.

ಈರಣ್ಣ ಐ. ದವಡಿ, ಹಳ್ಳದಕೇರಿ

ಹಾಯ್ ರಾಮ್. ವೃಶ್ಚಿಕಾ ಏನು ಮಾಡುತ್ತಿದ್ದಾಳೆ?

ಕೊಂಡಿಗಳು ಚೂಪಾಗಿಯೇ ಇರುವುದರಿಂದ ಅಲ್ಲಲ್ಲಿ, ಆಗಾಗ್ಗೆ ಕುಟುಕುತ್ತಿದ್ದಾಳೆ.

ಪ್ರಶ್ನೆಗಳನ್ನು ಕಳುಹಿಸಿ:
editorsu@sudha.co.in

■ ರಾಮ್